ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 2–1–2015

## ಪತ್ರಿಕಾ ಪ್ರಕಟಣೆ

## ಗ್ರಂಥಾಲಯಕ್ಕೆ ನೀಡುವ ಪುಸ್ತಕಗಳ ಆಯ್ಕೆಗೆ ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)

ಸಾರ್ವಜನಿಕ ಗ್ರಂಥಾಲಯ ಇಲಾಖೆಯು 2014ನೇ ವರ್ಷದ ಸೆಪ್ಟೆಂಬರ್ 01 2014 ಡಿಸೆಂಬರ್ 31 ರವರೆಗೆ ಪ್ರಥಮವಾಗಿ ಪ್ರಕಟಗೊಂಡ ಸಾಹಿತ್ಯ / ಲಲಿತಕಲೆ / ವಿಜ್ಞಾನ /ಮಾನವಿಕ/ ವೈದ್ಯಕೀಯ / ತಾಂತ್ರಿಕ / ಪರಾಮರ್ಶನ ಕೃತಿಗಳು ಹಾಗೂ ವಿಷಯಗಳ ಕನ್ನಡ/ಆಂಗ್ಲ/ಇತರೆ ಭಾರತೀಯ ಗ್ರಂಥಗಳ ಆಯ್ಕೆಗೆ ಲೇಖಕ, ಲೇಖಕ–ಪ್ರಕಾಶಕ, ಪ್ರಕಾಶಕರು, ಸಂಸ್ಥೆಗಳು ಹಾಗೂ ವಿತರಕರಿಂದ ಎರಡನೇ ಹಂತದಲ್ಲಿ ಪುಸ್ತಕಗಳನ್ನು ಆಹ್ವಾನಿಸಿದೆ.

ಮೇಲೆ ತಿಳಿಸಿದ ಅವಧಿಯೊಳಗೆ ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560 001 ಇಲ್ಲಿಗೆ ದಿನಾಂಕ 31–01–2015 ಸಂಜೆ 5.30 ರ ಒಳಗಾಗಿ ಸಲ್ಲಿಸುವುದು. ತದನಂತರ ಯಾವುದೇ ಕೃತಿಗಳನ್ನು ಸ್ವೀಕರಿಸಲಾಗುವುದಿಲ್ಲ

ಪಹೊ:ಬಾಬು:ಜಿಪಿಆರ್

## ನ್ಯಾ. ವೈದ್ಯನಾಥನ್ ಆಯೋಗದ ಅವಧಿ ವಿಸ್ತರಣೆ

ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)

2012 ರ ಮಾರ್ಚ್ 2 ರಂದು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಮುಂದೆ ನಡೆದ ಗಲಭೆಗಳ ಹಿನ್ನೆಲೆಯಲ್ಲಿ ಏರ್ಪಡಿಸಿರುವ ನ್ಯಾಯಮೂರ್ತಿ ಆರ್. ಜಿ. ವೈದ್ಯನಾಥನ್ ಆಯೋಗದ ವಿಚಾರಣೆ ಅವಧಿಯನ್ನು 2015 ರ ಜನವರಿ 31 ರವರೆಗೆ ವಿಸ್ತರಿಸಿ ರಾಜ್ಯಾಪಾಲರು ಆದೇಶ ಹೊರಡಿಸಿದ್ದಾರೆ.

ಪಹೊ:ಬಾಬು:ಜಿಪಿಆರ್

# ತಾಂತ್ರಿಕ ಅಲ್ಪಾವಧಿ ತರಬೇತಿ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಸರ್ಕಾರದ ಸ್ವಾಯುಕ್ತ ಸಂಸ್ಥೆಯಾಗಿದ್ದು, ರಾಜ್ಯದಲ್ಲಿ ವಿವಿಧ ಜಿಲ್ಲೆಯಲ್ಲಿ 20 ಉಪ ಕೇಂದ್ರಗಳನ್ನು ಹೊಂದಿದ್ದು, ಡಿಪ್ಲೋಮೊ, ಎಂ.ಟೆಕ್ ಹಾಗೂ ಇತರೆ ಅಲ್ಪಾವಧಿ ತಾಂತ್ರಿಕ ತರಬೇತಿಯನ್ನು ನೀಡಲು ಅರ್ಜಿ ಆಹ್ವಾನಿಸಿದೆ.

ನಿಗದಿತ ಅರ್ಜಿ ನಮೂನೆಯನ್ನು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಜಾಜಿನಗರ, ಕೈಗಾರಿಕಾ ವಸಾಹತು, ಬೆಂಗಳೂರು ನಗರ ಜಿಲ್ಲೆ – 560 010 ಇಲ್ಲಿ ಪಡೆದು ಸಂಪೂರ್ಣ ವಿವರಗಳೊಂದಿಗೆ ಭರ್ತಿಮಾಡಿ ದ್ವಿಪ್ರತಿಯಲ್ಲಿ ದಿನಾಂಕ : 09–01–2015 ರೊಳಗಾಗಿ ಮೇಲೆ ತಿಳಿಸಿರುವ ಕೇಂದ್ರದ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ದಿನಾಂಕ 12–01–2015 ರಂದು ಬೆಳಿಗ್ಗೆ 10.30 ಗಂಟೆಗೆ ಇದೇ ಕೇಂದ್ರದಲ್ಲಿ ದಾಖಲಾತಿಗಳೊಂದಿಗೆ ಅಭ್ಯರ್ಥಿಯೂ ಹಾಜರಾಗಬಹುದು.

ತರಬೇತಿಗಳನ್ನು ಬ್ಯಾಚ್‍ಗಳಲ್ಲಿ ದಿನಾಂಕ 14–01–2015 ರಿಂದ ಪ್ರಾರಂಭಿಸಲಾಗುವುದು ಶಿಷ್ಯವೇತನ: ಪ್ರತಿ ಅಭ್ಯರ್ಥಿಗೆ ಪ್ರತಿ ತಿಂಗಳು ರೂ 1500/– ರಿಂದ ರೂ 2,000/– ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬೆಂಗಳೂರು ನಗರ ಜಿಲ್ಲೆಯ ಖಾಯಂ ನಿವಾಸಿಗಳಾಗಿರಬೇಕು ಹಾಗೂ 18 ವರ್ಷದಿಂದ 35 ವರ್ಷದೊಳಗಿರಬೇಕು. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 – 23501481, 080 – 23501478 ಅಥವಾ 9141629585, 9916928415.

ಪಹೊ:ಬಾಬು:ಜಿಪಿಆರ್

# ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಧಾರ್ಮಿಕ ಸಂಸ್ಥೆಗಳು/ಸಂಘ ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‍ಗಳು ನಡೆಸುವ ವಿದ್ಯಾರ್ಥಿನಿಲಯಗಳ ಕಟ್ಟಡ, ಶಾಲಾ ಕಾಲೇಜುಗಳ ಕಟ್ಟಡ ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣ ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನಿಸಿದೆ.

**ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ವಿಳಾಸ www.sw.kar.nic.in ನಲ್ಲಿ ವೀಕ್ಷಿಸುಬಹುದಾಗಿದೆ. ಸದರಿ ಯೋಜನೆಯಡಿ ಸಹಾಯಧನ ಕೋರಲು ಇಚ್ಚಿಸುವ ಆಸಕ್ತ ಸಂಘ–ಸಂಸ್ಥೆಗಳು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ಈ ಪ್ರಕಟಣೆ ನೀಡಿದ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಹಾಗೂ ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹದುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.**

ಪಹೊ:ಬಾಬು:ಜಿಪಿಆರ್